# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ.462/2018

ಸಿಡಬ್ಲ್ಯೂ-2 ಪಿಡಬ್ಲ್ಯೂ-1

| | |
|---|---|
| ಹೆಸರುಃ | ಶ್ರೀ ಸೂರ್ಯಕಾಂತ |
| ತಂದೆ ಹೆಸರುಃ | ಸಾಬಣ್ಣ ಬೊಯಿನ್ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ವ್ಯವಸಾಯ |
| ವಾಸ ಸ್ಥಳಃ | ಸೇಡಂ |

ದಿನಾಂಕ 10-10-2022

ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ

ಆರೋಪಿಯ ಪರಿಚಯ ನನಗೆ ಇರುತ್ತದೆ. ನ್ಯಾಯಾಲಯದ ಮುಂದಿರುವ ಮು.ಮಾ.ಗಳನ್ನು ಗುರುತಿಸಲು ಆಗುವುದಿಲ್ಲ. ಈಗ ತೋರಿಸುತ್ತಿರುವ ದಾಖಲೆಯ ಮೇಲಿರುವ ಸಹಿ ನನ್ನದೆ ಇರುತ್ತದೆ. ಅದು ಪಂಚನಾಮೆಯಾಗಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನಾನು ಸೇಡಂದಲ್ಲಿ ಚಹಾ ಕುಡಿಯುತ್ತಿರುವಾಗ ಪೊಲೀಸರು ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಿಪಿ-1ರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ನಾನು ಯಾವುದೇ ಪಂಚನಾಮೆಯಲ್ಲಿ ಭಾಗವಹಿಸಿಲ್ಲ. ನನ್ನ ಸಮಕ್ಷಮ ಈಗ ನ್ಯಾಯಾಲಯದ ಮುಂದಿರುವ ಮು.ಮಾ.ನ್ನು ಜಪ್ತುಪಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

## ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ

ದಿನಾಂಕ 16.04.2018ರಂದು ಮುಂಜಾನೆ 09.30ಗಂಟೆಗೆ ನಮ್ಮನ್ನು ಸೇಡಂ ಪೊಲೀಸ ಠಾಣೆಯ ಶ್ರೀ ಮಾರುತಿ ಪಿಸಿಯವರು ಠಾಣೆಗೆ ಕರೆಯಿಸಿದ್ದು, ದೊಡ್ಡ ಅಗಸಿ ಏರಿಯಾದಲ್ಲಿ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಬಾತ್ಮಿಯ ಆಧಾರದ ಮೇಲಿಂದ ನಾವು ರೆಡದಲ್ಲಿ ಪಂಚನಾಮೆಗೆ ಭಾಗವಹಿಸಲು ಒಪ್ಪಿ ಮುಂಜಾನೆ 09.45ಗಂಟೆಗೆ ಠಾಣೆಯಿಂದ ಹೊರಟು ದೊಡ್ಡ ಅಗಸಿ ಏರಿಯಾದಲ್ಲಿ ಕೊಡಂಪಲ್ಲಿ ಮಲ್ಲಪ್ಪ ಇವರ ಮನೆಯ ಹತ್ತಿರ ಸರಕಾರಿ ಜೀಪ ನಂ.KA-32 G-0312 ನಿಲ್ಲಿಸಿ ಮನೆಯ ಮರೆಯಾಗಿ

ವಾಚ್ ಮಾಡುತ್ತಿರುವಾಗ ಈಗ ನ್ಯಾಯಾಲಯದ ಮುಂದಿರುವ ಆರೋಪಿ ಚೀಲದಲ್ಲಿ ಬಿಳಿಯ ಪಾಕೇಟಗಳನ್ನು ಹಾಕಿಕೊಂಡು ಜನರಿಂದ ಹಣ ಪಡೆದು ಒಂದು ಪಾಕೇಟನ್ನು ನೀಡುತ್ತಿರುವುದನ್ನು ಖಾತ್ರಿ ಪಡಿಸಿಕೊಂಡು ಪೊಲೀಸ್ ಅಧಿಕಾರಿಗಳು ಅವಳ ಮೇಲೆ ಏಕಕಾಲದಲ್ಲಿ ದಾಳಿ ಮಾಡಲು ಆರೋಪಿ ಅಲ್ಲಿಂದ ಓಡಿ ಹೋಗಿರುತ್ತಾಳೆ ಎಂದರೆ ಸರಿಯಲ್ಲ. ಆಗ ಅಲ್ಲಿಯೇ ಹಾಜರಿದ್ದ ರಂಗನಾಥ ನಿಪ್ಪಾಣಿ, ಸಂತೋಷ ತಳವಾರ ಇವರಿಗೆ ಹೆಸರು ವಿಚಾರಿಸಲಾಗಿ ಅವರು ಆರೋಪಿಯ ಹೆಸರನ್ನು ಸಾಬಮ್ಮ @ ಲಲಿತಾ ಗಂಡ ಈರಣ @ ಹಣಮಂತ ವಡ್ಡರ ಅಂತಾ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ಪಿಎಸ್ಐ ಸಾಹೇಬರು ನಮ್ಮ ಸಮಕ್ಷಮ ಚೀಲವನ್ನು ತೆರೆದು ನೋಡಿದ್ದು 30 ಸೇಂದಿ ಪಾಕೇಟುಗಳು ಇದ್ದವು ಸದರಿ ಸೇಂದಿ ಪಾಕೇಟುಗಳನ್ನು ಜಪ್ತಿಮಾಡಿಕೊಂಡು ಅದರಲಿಂದ 1 ಪಾಕೇಟನ್ನು ಒಂದು ಪ್ಲಾಸ್ಟಿಕ ಬಾಟಲಿಯಲ್ಲಿ ಹಾಕಿ ರಾಸಾಯನಿಕ ಪರೀಕ್ಷೆ ಕುರಿತು ಪ್ರತ್ಯೆಕವಾಗಿ ಜಪ್ತು ಮಾಡಿ ಉಳಿದ 29 ಸೇಂದಿ ಪಾಕೇಟುಗಳನ್ನು ಒಂದು ಚೀಲದಲ್ಲಿ ಹಾಕಿ ಜಪ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿಯ ಪಂಚನಾಮೆಯನ್ನು ಮುಂಜಾನೆ 10.00 ರಿಂದ 11.00 ಗಂಟೆಯವರೆಗೆ ಬರೆದು ಮುಗಿಸಿ ಅದರ ಎಲ್ಲ ಸಂಗತಿ ತಿಳಿದುಕೊಂಡು ನಾನು ಸ್ಥಳದಲ್ಲಿಯೇ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಭಾಗವಹಿಸಿದ್ದರೂ ಈಗ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH